




# ಬೆರ್ಚಪ್ಪಗಳ ಹಬ್ಬ!

ನಮಗೆಲ್ಲಾ ಬೆರ್ಚಪ್ಪ ಎಂದರೆ ಗೊತ್ತೇ ಇದೆ. ಎರಡು ಉದ್ದನೆಯ ಬಿದಿರಿನ ಕೋಲಿಗೆ ಒಂದು ಅಡ್ಡ ಪಟ್ಟಿ ಹೊಡೆದು ಹಳೆಯದೊಂದು ಪೈಜಾಮ, ದೊಗಲೆ ಅಂಗಿ ಹಾಕಿ ಒಳಗೆ ಹುಲ್ಲು ತುಂಬಿ ಮೇಲೊಂದು ಮಡಕೆ ಕವುಚಿ ಅದಕ್ಕೆ ಸುಣ್ಣದಲ್ಲಿ ವಿಕಾರವಾಗಿ ಕಣ್ಣು, ಬಾಯಿ ಬರೆದು ಬಿಟ್ಟರೆ ನಮ್ಮ ಬೆರ್ಚಪ್ಪ ರೆಡಿ.

ರೈತರು ಪಕ್ಷಿ ಪ್ರಾಣಿಗಳಿಂದ ಬೆಳೆಗೆ ರಕ್ಷಣೆ ಪಡೆಯಲು ಮತ್ತು ಹೊಸ ಮನೆಗಳಿಗೆ ದೃಷ್ಟಿ ತಾಕದಿರಲೆಂದು ಬೆರ್ಚಪ್ಪನನ್ನು ಕಟ್ಟುತ್ತಾರೆ. ಬೆಳೆ ಬಂದ ಮೇಲೆ ಬೆರ್ಚಪ್ಪ ಯಾರಿಗೂ ಬೇಡ. ಆದರೆ ವಿದೇಶಗಳಲ್ಲಿ ಹಾಗಲ್ಲ, ಬ್ರಿಟನ್, ಅಮೆರಿಕ ಮೊದಲಾದ ದೇಶಗಳಲ್ಲಿ ಬೆರ್ಚಪ್ಪನಿಗೆಂದೇ ಪ್ರತಿವರ್ಷ ಸ್ಕೇರ್ ಕ್ರೋ ಫೆಸ್ಟಿವಲ್ ಎಂಬ ಒಂದು ಹಬ್ಬವನ್ನು ಮಾಡಿ ಸಾವಿರಾರು ಜನರು ಒಟ್ಟಾಗಿ ಸೇರಿ ಸಂಭ್ರಮಿಸುತ್ತಾರೆ. ಅದಕ್ಕೆಂದೇ ಪ್ರತಿವರ್ಷ ಒಂದು ವಿಷಯ ನೀಡಿ ಸ್ಪರ್ಧೆ ಏರ್ಪಡಿಸಲಾಗುತ್ತದೆ. ಆ ವಿಷಯ ಆಧರಿಸಿ ಅಲ್ಲಿನ ಜನರು ಆಕರ್ಷಕ ವಿನ್ಯಾಸದ ಬೆರ್ಚಪ್ಪಗಳನ್ನು ತಯಾರಿಸುತ್ತಾರೆ. ಹತ್ತಾರು ಕಿಲೋಮೀಟರ್ ಕಾಡಿನ ಭಾಗಗಳಲ್ಲಿ ಅಲ್ಲಲ್ಲಿ ಇವುಗಳ ಪ್ರದರ್ಶನಕ್ಕೆ ಏರ್ಪಾಟು ಮಾಡಿ ಬೆರ್ಚಪ್ಪಗ್ರಾಮ ಮಾಡಿ ಅದಕ್ಕೆ ರೂಟ್ ಮ್ಯಾಪ್ ನೀಡಲಾಗುತ್ತದೆ.

ಈ ವರ್ಷ ನಾರ್ಲ್ಯಾಂಡ್‌ನಲ್ಲಿ ಸೆಪ್ಟೆಂಬರ್ ಒಂದರಿಂದ ನಾಲ್ಕು ದಿನ ನಡೆದ ಸ್ಕೇರ್ ಕ್ರೋ ಫೆಸ್ಟಿವಲ್ ಸ್ಪರ್ಧೆಗೆ ಕೊಟ್ಟಿದ್ದ ವಿಷಯ 'ಸೂಪರ್ ಹೀರೊಸ್ ಅಂಡ್ ವಿಲನ್ಸ್'.

ಸ್ಕೇರ್‌ಕ್ರೋ ಎಂದರೆ ಎಲ್ಲವನ್ನೂ ಬಲ್ಲ ನಡೆಯಲಾಗದ ದೇವತೆ ಎಂದು ಜಪಾನಿಗಳು ನಂಬುತ್ತಾರೆ. ಸುಮಾರು 1990ರ ಅವಧಿಯಲ್ಲಿ ಈ ಬೆರ್ಚಪ್ಪಗಳ ಹಬ್ಬ ಇಂಗ್ಲೆಂಡ್‌ನಲ್ಲಿ ಶುರುವಾಯಿತು. ಆಗಿನಿಂದ ನಾರ್ಲ್ಯಾಂಡ್, ಸ್ಕಾಟ್‌ಲಂಡ್, ಡ್ಯೂರೋಸ್ ಮುಂತಾದೆಡೆಗಳಲ್ಲಿ ಈ ಹಬ್ಬವನ್ನು ಆಚರಿಸಲಾಗುತ್ತಿದೆ. ಈ ಹಬ್ಬದ ಉದ್ದೇಶ ಕೇವಲ ತಿಂದು ಕುಡಿದು ಮೋಜು ಮಾಡಿ ಹೋಗುವುದಲ್ಲ. ಈ ಬೆರ್ಚಪ್ಪಗಳ ಮಾರಾಟ, ಇತರೆ ಆಹಾರ ಪದಾರ್ಥಗಳ ಮಾರಾಟದಿಂದ ಸಂಗ್ರಹಿಸಲಾಗುವ ಮೊತ್ತವನ್ನು ಸ್ಥಳೀಯ ಸಮುದಾಯದ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳಿಗೆ ಬಳಸಲಾಗುತ್ತದೆ ಎಂಬುದೇ ದೊಡ್ಡ ಹೈಲೈಟ್.

ನಾರ್ಲ್ಯಾಂಡ್‌ನಲ್ಲಿ ಈ ವರ್ಷ ಸ್ಕೇರ್ ಕ್ರೋ ಫೆಸ್ಟಿವಲ್‌ನಿಂದ ಸಂಗ್ರಹವಾದ ಹಣವನ್ನು 16 ಸಮಾಜ ಸೇವಾ ಸಂಸ್ಥೆಗಳಿಗೆ ದೇಣಿಗೆಯಾಗಿ ನೀಡಲಾಗಿದೆ. ನಮ್ಮಲ್ಲಿ ಬೆರ್ಚಪ್ಪ ಎಂದರೆ ಅದು ಗಂಡಸೇ. ಮನೆ ಒಳಗೆ ಹೆಂಡತಿಗೆ ಹೆದರುವ ಬೆದರುಬೊಂಬೆಯಾದರೂ ಹೊರಗೆ ಅವನೇ ಶೂರ! ಆದರೆ ವಿದೇಶಗಳಲ್ಲಿ ಹಾಗಲ್ಲ, ಅಲ್ಲಿ ಮನೆ ಬಿಟ್ಟು ಬಂದು ಹೆದರಿಸುವ ಬೆರ್ಚಮ್ಮಗಳೂ ಇದ್ದಾರೆ ಎನ್ನುವುದೇ ವಿಶೇಷ!

■ **ಟಿ.ಪಿ. ಶರಧಿ, ಹಾಸನ**



